Dy 19/12

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ (PPP-IAD) ಹಾಗೂ ರೈತ ಉತ್ಪಾದಕರ ಸಂಸ್ಥೆಗಳ (FPO) ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಯೋಜನಾ ಉಸ್ತುವಾರಿ ಘಟಕ (Project Monitoring Unit-PMU) ಹಾಗೂ ಪಿಪಿಪಿಐಎಡಿ ಕೋಶವನ್ನು ರಚಿಸುವ ಕುರಿತು.

19/12/2017

ಓದಲಾಗಿದೆ 1. ಸರ್ಕಾರದ ಆದೇಶ ಸಂ: ಕೃಇ 75 ಕೃಉಇ 2017, ದಿನಾಂಕ: 27.11.2017.
2. ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆರವರ ಪ್ರಸ್ತಾವನೆ ಸಂಖ್ಯೆ: ಜಅಇ/ ಜಕೋಶ/PPP – IAD/1/2017-18, ದಿನಾಂಕ: 30.11.2017.

## ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ, ರಾಜ್ಯದಲ್ಲಿ 2017–18ನೇ ಸಾಲಿನಿಂದ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ (PPP-IAD) ಕಾರ್ಯಕ್ರಮ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಅದನ್ನು ಮೇಲುಸ್ತುವಾರಿ ಮಾಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಕೃಷಿ ಇಲಾಖೆರವರ ನೇತೃತ್ವದಲ್ಲಿ ಯೋಜನಾ ಅನುಮೋದನಾ ಸಮಿತಿಯನ್ನು ರಚಿಸಲಾಗಿದೆ.

ಮೇಲೆ ಓದಲಾದ (2)ರ ಪ್ರಸ್ತಾವನೆಯಲ್ಲಿ, ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಯೋಜನೆಯ ಒಟ್ಟಾರೆ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸುವುದಕ್ಕಾಗಿ, ರೈತ ಉತ್ಪಾದಕ ಸಂಸ್ಥೆಗಳಿಗೆ ಸಂಬಂಧಿಸಿದ ವಿವಿಧ ಅಂಶಗಳ ಪರಿಣಾಮಕಾರಿ ಮೇಲ್ವಿಚಾರಣೆಗಾಗಿ ಹಾಗೂ ಕ್ಷೇತ್ರ ಮಟ್ಟದ ಅಧಿಕಾರಿಗಳು ಮತ್ತು ಖಾಸಗಿ ಸಂಸ್ಥೆಯವರ ನಡುವೆ ಸಂಯೋಜನೆ ಮಾಡಲು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಯೋಜನಾ ಉಸ್ತುವಾರಿ ಘಟಕ (Project Monitoring Unit-PMU) ಹಾಗೂ ಪಿಪಿಪಿಐಎಡಿ ಕೋಶವನ್ನು(PPP-IAD Cell) ರಚಿಸಿ ಸರ್ಕಾರೀ ಆದೇಶವನ್ನು ಹೊರಡಿಸುವಂತೆ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಕೃಇ 75 ಕೃಉಇ 2017, ಬೆಂಗಳೂರು, ದಿನಾಂಕ: 19.12.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ ಯೋಜನೆಯ (PPP-IAD) ಒಟ್ಟಾರೆ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸುವುದಕ್ಕಾಗಿ, ರೈತ ಉತ್ಪಾದಕ ಸಂಸ್ಥೆಗಳಿಗೆ ಸಂಬಂಧಿಸಿದ ವಿವಿಧ ಅಂಶಗಳ ಪರಿಣಾಮಕಾರಿ ಮೇಲ್ವಿಚಾರಣೆಗಾಗಿ ಹಾಗೂ ಕ್ಷೇತ್ರ ಮಟ್ಟದ ಅಧಿಕಾರಿಗಳು ಮತ್ತು ಖಾಸಗಿ ಸಂಸ್ಥೆಯವರ ನಡುವೆ ಸಂಯೋಜನೆ ಮಾಡಲು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಈ ಕೆಳಕಂಡಂತೆ ಯೋಜನಾ ಉಸ್ತುವಾರಿ ಘಟಕ (Project Monitoring Unit-PMU) ಹಾಗೂ ಪಿಪಿಪಿಐಎಡಿ ಕೋಶವನ್ನು(PPP-IAD Cell) ರಚಿಸಲು ಸರ್ಕಾರವು ಅನುಮೋದಿಸಿದೆ.

ಯೋಜನಾ ಉಸ್ತುವಾರಿ ಘಟಕ (Project Monitoring Unit-PMU):

| | | |
|---|---|---|
| 1 | ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ | ಅಧ್ಯಕ್ಷರು. |
| 2 | ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 3 | ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 4 | ಜಂಟಿ ಕೃಷಿ ನಿರ್ದೇಶಕರು (ಭೂಸಾರ ಸಂರಕ್ಷಣೆ), ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 5 | ಜಂಟಿ ಕೃಷಿ ನಿರ್ದೇಶಕರು (ಕೃಷಿ ಶಾಸ್ತ್ರ), ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 6 | ಜಂಟಿ ಕೃಷಿ ನಿರ್ದೇಶಕರು (ಆದಾಯ ಉತ್ಪನ್ನ ಚಟುವಟಿಕೆ), ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 7 | ಜಂಟಿ ನಿರ್ದೇಶಕರು (ತೋಟಗಾರಿಕೆ), ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 8 | ಜಂಟಿ ನಿರ್ದೇಶಕರು (ಪಶುಸಂಗೋಪನೆ), ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 9 | ಜಂಟಿ ನಿರ್ದೇಶಕರು (ಯೋಜನಾ), ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 10 | ಸಂಬಂಧಪಟ್ಟ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು | ಸದಸ್ಯರು |
| 11 | ಉಪ ಕೃಷಿ ನಿರ್ದೇಶಕರು, ಜಲಾನಯನ ಕೋಶ, ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯ ಕಾರ್ಯದರ್ಶಿ |

ಯೋಜನಾ ಉಸ್ತುವಾರಿ ಘಟಕದ ಕಾರ್ಯಗಳು:

1. ಯೋಜನೆಯ ಅನುಷ್ಠಾನದ ಮಾರ್ಗಸೂಚಿ ಹಾಗೂ ಮಾನದಂಡವನ್ನು ರೂಪಿಸುವುದು.
2. ಯೋಜನೆಗಳನ್ನು ಆಹ್ವಾನಿಸುವುದು, ಮೌಲ್ಯಮಾಪನ ಮಾಡಿ ಮತ್ತು ಆಯ್ಕೆಗಾಗಿ ಯೋಜನಾ ಅನುಮೋದನಾ ಸಮಿತಿಗೆ ಶಿಫಾರಸ್ಸು ಮಾಡುವುದು.
3. ಯೋಜನಾ ಅನುಮೋದನಾ ಸಮಿತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ನೆರವು ನೀಡವುದು.
4. ಯೋಜನೆಯ ಅನುಷ್ಠಾನ ಮತ್ತು ಪ್ರಗತಿಯ ಉಸ್ತುವಾರಿ ಮಾಡುವುದು.
5. ಯೋಜನೆಯ ಅನುಷ್ಠಾನವನ್ನು ತ್ವರಿತಗತಿಯಲ್ಲಿ ಸಾಧಿಸಲು ಮತ್ತು ಖಾಸಗಿ ಸಂಸ್ಥೆಯವರು ಸಲ್ಲಿಸುವ ಪ್ರಯೋಜನೆಗಳನ್ನು ಪರಿಶೀಲಿಸಲು ಕೃಷಿ ಮತ್ತು ಕೃಷಿಯೇತರ ವಿಷಯಗಳಲ್ಲಿ ಪರಿಣಿತರು / ಸಲಹೆಗಾರರನ್ನು ಹೊರಗುತ್ತಿಗೆ ಸಿಬ್ಬಂದಿ ಸಹಾಯ ಪಡೆದುಕೊಳ್ಳುವುದು.
6. ಸೂಕ್ತವಾದ ಪ್ರಚಾರದ ಮೂಲಕ FPO ಮತ್ತು PPP-IAD ಯೋಜನೆಗಳನ್ನು ಜನಪ್ರಿಯಗೊಳಿಸುವುದು.
7. ಯೋಜನೆಯ ಪ್ರಗತಿಯನ್ನು ಹಾಗೂ ಪ್ರಸ್ತಾವನೆಗಳನ್ನು ಪರಿಶೀಲಿಸಲು ಕನಿಷ್ಠ ತಿಂಗಳಿಗೊಮ್ಮೆ ಸಭೆ ಸೇರುವುದು.
8. ಕಾಲಕಾಲಕ್ಕೆ ಯೋಜನೆಯ ಮೌಲ್ಯಮಾಪನವನ್ನು ಮಾಡಿಸುವುದು.
9. ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇನ್ನಿತರೇ ವಿಷಯಗಳನ್ನು ತೀರ್ಮಾನಿಸುವುದು.

PPP-IAD ಕೋಶ:

| ಕ್ರ.ಸಂ. | ವಿವರಗಳು |
|---|---|
| 1 | ಉಪ ಕೃಷಿ ನಿರ್ದೇಶಕರು, ಜಲಾನಯನ ಕೋಶ, ಜಲಾನಯನ ಅಭಿವೃದ್ಧಿ ಇಲಾಖೆ–ಮುಖ್ಯಸ್ಥರು |
| 2 | ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಕೋಶ, ಜಲಾನಯನ ಅಭಿವೃದ್ಧಿ ಇಲಾಖೆ |
| 3 | ಕೃಷಿ ಅಧಿಕಾರಿ– 2 ಸಂಖ್ಯೆ (ಕೃಷಿ ಇಲಾಖೆಯಿಂದ ನಿಯೋಜನೆ ಮೇರೆಗೆ) |
| 4 | ಕೃಷಿ ಹಾಗೂ ಕೃಷಿಯೇತರ ವಿಷಯಗಳಲ್ಲಿ ಪರಿಣಿತರು/ಸಲಹೆಗಾರರು–ಹೊರಗುತ್ತಿಗೆ ಆಧಾರದ ಮೇರೆಗೆ ಅಥವಾ ಬಾಹ್ಯ ಸಂಸ್ಥೆಗಳಿಂದ ನಿಯೋಜನೆ ಮೇರೆಗೆ |
| 5 | ಘಟಕದ ಕಾರ್ಯಗಳಲ್ಲಿ ಸಹಕರಿಸಲು ಕಛೇರಿ ಸಹಾಯಕರು, ಡಾಟಾ ಎಂಟ್ರಿ ಆಪರೇಟರ್ ಹಾಗೂ 'ಡಿ' ಗ್ರೂಪ್ ನೌಕರರು – ಹೊರಗುತ್ತಿಗೆ ಆಧಾರದ ಮೇರೆಗೆ |

PPP-IAD ಕೋಶದ ಕಾರ್ಯಗಳು:

1. ಯೋಜನೆಗೆ ಸಂಬಂಧಿಸಿದಂತೆ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸುವುದು.
2. ಯೋಜನೆಗಳನ್ನು ಆಹ್ವಾನಿಸುವುದು, ಮೌಲ್ಯಮಾಪನ ಮಾಡಿ ಮತ್ತು ಆಯ್ಕೆಗಾಗಿ ಯೋಜನಾ ಉಸ್ತುವಾರಿ ಘಟಕಕ್ಕೆ ಶಿಫಾರಸ್ಸು ಮಾಡುವುದು.
3. ಯೋಜನೆಯ ಅನುಷ್ಠಾನ ಮತ್ತು ಪ್ರಗತಿಯನ್ನು ಉಸ್ತುವಾರಿ ಮಾಡುವುದು.
4. ಯೋಜನಾ ಉಸ್ತುವಾರಿ ಘಟಕಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ನೆರವು ನೀಡುವುದು.
5. ಯೋಜನೆಯ ಪ್ರಾರಂಭದಿಂದ ಕೊನೆಯವರೆಗೆ ಯೋಜನೆಯ ವಿವರಗಳ ಡೇಟಾ ಬೇಸ್ ಮತ್ತು ಯೋಜನೆಯ ಅನುಷ್ಠಾನಕ್ಕೆ ಪೂರಕವಾದ ದತ್ತಾಂಶ ಅಭಿವೃದ್ಧಿಪಡಿಸುವುದು.
6. ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಖಾಸಗಿ ಸಂಸ್ಥೆಗಳ ನಡುವೆ ಸಂಯೋಜನೆ ಮಾಡುವುದು.

ಆಯುಕ್ತರು, ಕೃಷಿ ಇಲಾಖೆ/ ಜಲಾನಯನ ಅಭಿವೃದ್ಧಿ ಇಲಾಖೆರವರು ಕೇಂದ್ರ ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು.

ಯೋಜನಾ ಉಸ್ತುವಾರಿ ಘಟಕ (Project Monitoring Unit-PMU) ಹಾಗೂ ಪಿಪಿಪಿಐಎಡಿ ಕೋಶ (PPP-IAD Cell) ಘಟಕಗಳಿಗೆ ಅಗತ್ಯವಾದ ಹೊರಗುತ್ತಿಗೆ ಆಧಾರದ ಮೇರೆಗೆ ಅಥವಾ ಬಾಹ್ಯ ಸಂಸ್ಥೆಗಳಿಂದ ನಿಯೋಜನೆ ಮೇರೆಗೆ ಪಡೆದುಕೊಳ್ಳಲಾಗುವ ಸಿಬ್ಬಂದಿ/ಅಧಿಕಾರಿಗಳ ವೇತನ, ಇತರೆ ಖರ್ಚು/ವೆಚ್ಚಗಳನ್ನು ಸದರಿ ಯೋಜನೆಗೆ ನಿಗಧಿಪಡಿಸಿರುವ ಅನುದಾನದಲ್ಲಿನ ಆಡಳಿತಾತ್ಮಕ ವೆಚ್ಚದಡಿಯಲ್ಲಿಯೇ ಜಲಾನಯನ ಅಭಿವೃದ್ಧಿ ಆಯುಕ್ತರು ಅವರಿಗೆ ನೀಡಲಾಗಿರುವ ಆರ್ಥಿಕ ಅಧಿಕಾರದ ಮಿತಿಯೊಳಗೆ ನಿಯಮಾನುಸಾರ ಭರಿಸಲು ಸರ್ಕಾರವು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಎನ್. ರಾಜೇಶ್ವರಿ 19/12/17
(ಎನ್. ರಾಜೇಶ್ವರಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಕೃಷಿ ಇಲಾಖೆ (ಯೋಜನೆ)
19/12/17

ಇವರಿಗೆ:–

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು–01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.

3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು.
7. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
8. ಆಯುಕ್ತರು,/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
9. ಆಯುಕ್ತರು,/ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು.
10. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
11. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
13. ಎಲ್ಲಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರುಗಳು (ಕೃಷಿ ನಿರ್ದೇಶಕರ ಮುಖಾಂತರ).
14. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ– 4&5), ಆರ್ಥಿಕ ಇಲಾಖೆ, ಬೆಂಗಳೂರು
16. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
17. ಸಚಿವ ಸಂಪುಟ ಶಾಖೆ (ಪ್ರಕರಣ ಸಂ:ಸಿ.672/2017), ವಿಧಾನಸೌಧ, ಬೆಂಗಳೂರು.
18. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.